# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1015 |
| ಸದಸ್ಯರ ಹೆಸರು | ಡಾ. ಎಂ. ಜಿ. ಮುಳೆ<br>(ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 25-08-2026 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಲವು ಜಿಲ್ಲೆಗಳಲ್ಲಿ ಮುಂಗಾರು ಆರಂಭದಲ್ಲೇ ಯೂರಿಯಾ ಹಾಗೂ ಡಿ.ಎ.ಪಿ (DAP) ಗೊಬ್ಬರಗಳ ತೀವ್ರ ಕೊರತೆಯಾಗಿ ರೈತರು ಆತಂಕಕ್ಕೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>
ಜಾಗತಿಕ ಮಟ್ಟದಲ್ಲಿ ಮಧ್ಯ ಪ್ರಾಚ್ಯದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಸಗೊಬ್ಬರ ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುಗಳು ಮತ್ತು ರಸಗೊಬ್ಬರಗಳ ಆಮದಿನಲ್ಲಿ ಅಸ್ಥಿರತೆ ಉಂಟಾದ್ದರಿಂದ ರಾಜ್ಯಕ್ಕೆ ರಸಗೊಬ್ಬರಗಳು ಬೇಡಿಕೆಯನ್ವಯ ಕೇಂದ್ರ ಸರ್ಕಾರದಿಂದ ಸರಬರಾಜಾಗದ ಕಾರಣ ಪೂರ್ವ ಮುಂಗಾರು ಜಿಲ್ಲೆಗಳಲ್ಲಿ ಯೂರಿಯಾ ಮತ್ತು ಡಿ.ಎ.ಪಿ ರಸಗೊಬ್ಬರದ ಕೊರತೆಯಾಗಿತ್ತು.<br><br>
ಏಪ್ರಿಲ್, ಮೇ, ಜೂನ್ ಮತ್ತು ಜುಲೈ 2026ರ ಮಾಹೆಗಳಲ್ಲಿ ಡಿ.ಎ.ಪಿ ರಸಗೊಬ್ಬರದ ಬೇಡಿಕೆ, ಸರಬರಾಜು ಮತ್ತು ಕೊರತೆ ವಿವರ ಈ ಕೆಳಕಂಡಂತಿದೆ.<br><br>
(ಮೆ.ಟನ್ ಗಳಲ್ಲಿ)<br>
<table>
<tr><th>ಕ್ರ. ಸಂ</th><th>ಮಾಹೆ</th><th>ಬೇಡಿಕೆ</th><th>ಸರಬರಾಜು</th><th>ಕೊರತೆ</th><th>ಶೇ. ಕೊರತೆ</th></tr>
<tr><td>1</td><td>ಏಪ್ರಿಲ್</td><td>69213</td><td>30377</td><td>38836</td><td>56</td></tr>
<tr><td>2</td><td>ಮೇ</td><td>91562</td><td>42736</td><td>48826</td><td>53</td></tr>
<tr><td>3</td><td>ಜೂನ್</td><td>83472</td><td>35528</td><td>47944</td><td>57</td></tr>
<tr><td>4</td><td>ಜುಲೈ</td><td>67775</td><td>73400</td><td>57478</td><td>15</td></tr>
</table><br>
ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಕಾಂಪ್ಲೆಕ್ಸ್ ರಸಗೊಬ್ಬರಗಳು, ಎಸ್ಎಸ್ಪಿ/ಟಿಎಸ್ಪಿ ಮತ್ತು ನ್ಯಾನೋ ಡಿ.ಎ.ಪಿ ಬಳಕೆಗೆ ವ್ಯಾಪಕವಾಗಿ ಪ್ರಚಾರ ನೀಡಿ ರೈತರಲ್ಲಿ ಅರಿವು ಮೂಡಿಸಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ನೀಗಿಸಲಾಗುತ್ತಿದೆ.<br>
ಮುಂದುವರೆದು, ಏಪ್ರಿಲ್ ಮತ್ತು ಜೂನ್ ಮಾಹೆಯಲ್ಲಿ ಕ್ರಮವಾಗಿ 0.14 ಲಕ್ಷ ಮೆ.ಟನ್ (ಶೇ.13.36) ಮತ್ತು 0.38 ಲಕ್ಷ ಮೆ.ಟನ್ (ಶೇ.16.77) ಯೂರಿಯಾ ರಸಗೊಬ್ಬರದ ಕೊರತೆಯಾಗಿತ್ತು. ಪ್ರಸ್ತುತ ಯೂರಿಯಾ ರಸಗೊಬ್ಬರದ ಸರಬರಾಜು ಸುಧಾರಿಸಿದ್ದು, ಯಾವುದೇ ಕೊರತೆಯಿರುವುದಿಲ್ಲ.
</td></tr>
</table>

| | | |
|---|---|---|
| ಆ) | ಕೇಂದ್ರದಿಂದ ಅನುದಾನ/ ದಾಸ್ತಾನು ಬಿಡುಗಡೆಯಾಗಿದ್ದರೂ ಸ್ಥಳೀಯ ವಿತರಣಾ ಲೋಪದಿಂದಾಗಿ ಗೊಬ್ಬರ ಸಿಗುತ್ತಿಲ್ಲ ಎಂಬ ಆರೋಪ ನಿಜವೇ; ಬೆಳೆಗಳ ಇಳುವರಿ ಕುಸಿತ ತಡೆಯಲು ಕೈಗೊಂಡಿರುವ ತುರ್ತು ಕ್ರಮಗಳೇನು; | ಜಾಗತಿಕ ಮಟ್ಟದಲ್ಲಿ ಮಧ್ಯ ಪ್ರಾಚ್ಯದ ಬಿಕ್ಕಟ್ಟಿನಿಂದಾಗಿ ಕೇಂದ್ರ ಸರ್ಕಾರದಿಂದ ರಾಜ್ಯದ ಬೇಡಿಕೆಗನುಗುಣವಾಗಿ ಡಿ.ಎ.ಪಿ ಮತ್ತು ಯೂರಿಯಾ ರಸಗೊಬ್ಬರ ಸರಬರಾಜಾಗದ ಕಾರಣ ರಾಜ್ಯದಲ್ಲಿ ಸದರಿ ರಸಗೊಬ್ಬರಗಳ ಕೊರತೆಯಾಗಿತ್ತು. ಆದರೆ, ಡಿ.ಎ.ಪಿ ಮತ್ತು ಯೂರಿಯಾ ರಸಗೊಬ್ಬರದ ಕೊರತೆಯಿಂದ ಬೆಳೆಗಳ ಇಳುವರಿ ಮೇಲೆ ಬೀರಬಹುದಾದ ಪರಿಣಾಮವನ್ನು ತಡೆಯಲು ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಕಾಂಪ್ಲೆಕ್ಸ್/ಎಸ್.ಎಸ್.ಪಿ /ಟಿ.ಎಸ್.ಪಿ ಹಾಗೂ ನ್ಯಾನೋ ಡಿ.ಎ.ಪಿ ಮತ್ತು ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ಅಮೋನಿಯಂ ಸಲ್ಫೇಟ್ ಮತ್ತು ನ್ಯಾನೋ ಯೂರಿಯಾ ರಸಗೊಬ್ಬರವನ್ನು ಬಳಕೆ ಮಾಡಲು ರೈತರಲ್ಲಿ ವ್ಯಾಪಕ ಪ್ರಚಾರದ ಮೂಲಕ ಅರಿವು ಮೂಡಿಸಲಾಗಿದೆ. ವಿತರಣಾ ವ್ಯವಸ್ಥೆಯಲ್ಲಿ ಯಾವುದೇ ಲೋಪ ಕಂಡುಬಂದಿರುವುದಿಲ್ಲ. ಪ್ರಸ್ತುತ ಯಾವುದೇ ರಸಗೊಬ್ಬರದ ಕೊರತೆಯಿರುವುದಿಲ್ಲ.<br>ಕೇಂದ್ರ ಸರ್ಕಾರವು ಏಕೀಕೃತ ರಾಷ್ಟ್ರೀಯ ಮಾಹಿತಿ ತಂತ್ರಜ್ಞಾನದ ಅಪ್ಲಿಕೇಶನ್ ಮೂಲಕ ದೇಶಾದ್ಯಂತ ಸ್ಥಿರವಾದ ದತ್ತಾಂಶವನ್ನು ಖಚಿತಪಡಿಸಲು ರಸಗೊಬ್ಬರ ಮಾರಾಟಕ್ಕೆ ಸಂಬಂಧಿಸಿದಂತೆ Agri Stack ದತ್ತಾಂಶವನ್ನು iFMS Portal ನೊಂದಿಗೆ ಸಂಯೋಜಿಸಿ ರಸಗೊಬ್ಬಗಳ ವಿತರಣೆಗೆ "National Fertilizers Framework" ನಡಿ Framework for Ferilizer Sale(FFS) ಮೊಬೈಲ್ ಅಪ್ಲಿಕೇಶನ್ ಅನ್ನು ಜಾರಿಗೆ ತಂದಿದ್ದು, ಸದರಿ App ಅನ್ನು ರಾಜ್ಯದಲ್ಲಿ ಪ್ರಾಯೋಗಿಕವಾಗಿ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಇಲ್ಲಿಯವರೆಗೆ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಯಲ್ಲಿ ಸದರಿ APP ನ ಮೂಲಕ ಕ್ರಮವಾಗಿ 88,192 ಮತ್ತು 83,198 ರೈತರು, 22,580 ಮೆ.ಟನ್ ಮತ್ತು 21767 ಮೆ.ಟನ್ ರಸಗೊಬ್ಬರವನ್ನು ಪಡೆದಿರುತ್ತಾರೆ. ಮುಂದುವರೆದು, ಸದರಿ ಮೊಬೈಲ್ App ಅನ್ನು ರಾಜ್ಯಾದ್ಯಂತ ಜಾರಿಗೆ ತರಲು ಉದ್ದೇಶಿಸಲಾಗಿದೆ. |
| ಇ) | ಕೃತಕ ಅಭಾವ ಸೃಷ್ಟಿಸಿ ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಪ್ಪು ಮಾರುಕಟ್ಟೆದಾರರ ವಿರುದ್ಧ ಅಗತ್ಯ ವಸ್ತುಗಳ ಕಾಯ್ದೆಯಡಿ (ECA) ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ವಿವರ ನೀಡುವುದು) | ರಸಗೊಬ್ಬರವನ್ನು ನಿಗದಿತ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡಿರುವ ಕೆಲವು ಪ್ರಕರಣಗಳು ವರದಿಯಾಗಿರುತ್ತವೆ.<br>ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ ರಾಜ್ಯದಲ್ಲಿ ರಸಗೊಬ್ಬರವನ್ನು ಗರಿಷ್ಠ ಮಾರಾಟ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿರುವ ಸಂಬಂಧ 04 ಜಿಲ್ಲೆಗಳಲ್ಲಿ 15 ಪ್ರಕರಣಗಳು ವರದಿಯಾಗಿದ್ದು, ರಸಗೊಬ್ಬರ (ನಿಯಂತ್ರಣ) ಆದೇಶ,1985 ಹಾಗೂ ಅಗತ್ಯ ವಸ್ತುಗಳ ಕಾಯ್ದೆ,1955ರನ್ವಯ ಸದರಿ ರಸಗೊಬ್ಬರ ಮಾರಾಟಗಾರರ ಪರವಾನಗಿಗಳನ್ನು ಅಮಾನತ್ತು ಮಾಡಲಾಗಿದೆ.<br>ವಿವರ ಈ ಕೆಳಕಂಡಂತಿದೆ:<br>1. ಬಳ್ಳಾರಿ-11<br>2. ಬೀದರ್-1<br>3. ಚಿಕ್ಕಮಗಳೂರು-2<br>4. ಯಾದಗಿರಿ-1 |

| | | |
|---|---|---|
| ಈ) | 'ಕೆ-ಕಿಸಾನ್' ತಂತ್ರಾಂಶ ಹಾಗೂ FID ಸರ್ವರ್ ತೊಂದರೆಯಿಂದ ಪೂರೈಕೆಗೆ ಅಡ್ಡಿಯಾಗುತ್ತಿರುವುದು ನಿಜವೇ; ಡಿಜಿಟಲ್ ಟ್ರ್ಯಾಕಿಂಗ್ ಮೂಲಕ ಕೊರತೆಯಿರುವ ಪ್ರದೇಶಗಳಿಗೆ ತಕ್ಷಣ ಗೊಬ್ಬರ ತಲುಪಿಸಲು ರೂಪಿಸಿರುವ ಸಾರಿಗೆ ಕ್ರಿಯಾ ಯೋಜನೆಗಳೇನು? | 'ಕೆ-ಕಿಸಾನ್' ತಂತ್ರಾಂಶದ ಸರ್ವರ್ ನಿಂದ ರಸಗೊಬ್ಬರ ವಿತರಣೆಗೆ ಯಾವುದೇ ತೊಂದರೆಯಾಗಿರುವುದಿಲ್ಲ.<br><br>iFMS ಪೋರ್ಟಲ್‌ನಲ್ಲಿ ನೈಜ ಸಮಯದಲ್ಲಿ ಜಿಲ್ಲೆಗಳಲ್ಲಿ ಲಭ್ಯವಿರುವ ದಾಸ್ತಾನು ಪ್ರಮಾಣವನ್ನು ಆಧರಿಸಿ/ಜಿಲ್ಲೆಯ ಬೇಡಿಕೆಗೆ ಅನುಗುಣವಾಗಿ ಸರಬರಾಜನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ ಹಾಗೂ ರಸಗೊಬ್ಬರ ಕಾಪು ದಾಸ್ತಾನನ್ನು ನಿರ್ವಹಿಸಲಾಗುತ್ತಿದ್ದು, ರಸಗೊಬ್ಬರದ ತೀವ್ರ ಬೇಡಿಕೆಯಿರುವ ಕಡೆ ಕಾಪು ದಾಸ್ತಾನಿನಿಂದ ಪೂರೈಕೆಗೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: AGRI/220/ACT/2026

P. M. Narendra Swamy

**(ಪಿ. ಎಂ. ನರೇಂದ್ರ ಸ್ವಾಮಿ)**

ಕೃಷಿ ಸಚಿವರು